**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾ ಯಿಕ**
**ದಂಡಾಧಿಕಾರಿಗಳವರ ನ್ಯಾಯಾಲಯ, ಹುಣಸೂರು**

**ಸಿ.ಸಿ. ಸಂಖ್ಯೆಃ 34/2023**

ಫಿರ್ಯಾದುದಾರರು : ಜೋಗಿಗೌಡ
ಬಿನ್ ರಾಮೇಗೌಡ,
ವಯಸ್ಸು ಸುಮಾರು **37** ವರ್ಷ,
ವಾಸಃ ತಿಪ್ಪಲಪುರ ಗ್ರಾಮ,
ಗಾವಡಗೆರೆ ಹೋಬಳಿ,
ಹುಣಸೂರು ತಾಲ್ಲೂಕು.

ವಿರುದ್ಧ,

ಆರೋಪಿ/ಗಳು : ನಾಗೇಗೌಡ
ಬಿನ್ ನಿಂಗೇಗೌಡ,
ವಯಸ್ಸು ಸುಮಾರು **39** ವರ್ಷ,
ವಾಸಃ ಹೆಗ್ಗಂದೂರು ಗ್ರಾಮ,
ಹನಗೋಡು ಹೋಬಳಿ,
ಹುಣಸೂರು ತಾಲ್ಲೂಕು,
ಮೈಸೂರು ಜಿಲ್ಲೆ.

**ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರ ರೀತ್ಯಾ ಆರೋಪಿಯ ಹೇಳಿಕೆ**

**ಪ್ರಶ್ನೆ 1:** ಪ್ರಾಸಾ-1 ಜೋಗಿಗೌಡ ಇವರು ತಮ್ಮ ಸಾಕ್ಷ್ಯದಲ್ಲಿ ಆರೋಪಿಯಾದ ನೀವು ಪಿರ್ಯಾದುದಾರರಿಗೆ ಕೊಡಬೇಕಾದ ಸಾಲದ ಬಾಬ್ತಿಗೆ ದಿನಾಂಕ 17.02.2022 ಇರುವ ರೂ.75,000/- ದ ಕರ್ನಾಟಕ ಬ್ಯಾಂಕ್ ಲಿಮಿಟೆಡ್, ಹುಣಸೂರು ಶಾಖೆ ಇಲ್ಲಿಗೆ ಸೇರಿದ ಚೆಕ್ ಸಂಖ್ಯೆ - 689693 ಅನ್ನು ನೀಡಿರುತ್ತೀರೆಂದು ಎಂದು ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನೀವು ಏನು ಹೇಳುವಿರಿ?

**ಉತ್ತರಃ**

**ಪ್ರಶ್ನೆ 2:** ಪ್ರಾಸಾ-1 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ, ಸದರಿ ಚೆಕ್ಕನ್ನು ಫಿರ್ಯಾದುದಾರರು ತಮ್ಮ ಬ್ಯಾಂಕ್ ಖಾತೆ ಇರುವ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಬ್ಯಾಂಕ್, ಹುಣಸೂರು ಶಾಖೆ ಇಲ್ಲಿಗೆ ನಗಧೀಕರಣಕ್ಕಾಗಿ

ಹಾಜರುಪಡಿಸಿದಾಗ, ಸದರಿ ಚೆಕ್ಕು **"Funds Insufficient"** ಎಂಬ ಹಿಂಬರಹದೊಂದಿಗೆ ದಿಃ 23.02.2022 ರಂದು ವಾಪಾಸಾಗಿರುತ್ತದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನೀವು ಏನು ಹೇಳುವಿರಿ?

**ಉತ್ತರಃ**

**ಪ್ರಶ್ನೆ 3:** ಪ್ರಾಸಾ-1 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ಆದ್ದರಿಂದ ಫಿರ್ಯಾದುದಾರರು ತಮ್ಮ ವಕೀಲರ ಮುಖಾಂತರ 28.02.2022 ರಂದು ನೊಂದಾಯಿತ ಅಂಚೆ ಮೂಲಕ ನೊಟೀಸನ್ನು ಮೇಲೆ ತಿಳಿಸಿದ ವಿಳಾಸಕ್ಕೆ ಕಳುಹಿಸಿದ್ದು, ಸದರಿ ನೋಟೀಸ್ ದಿಃ 08.03.2023 ರಂದು ಜಾರಿಯಾಗಿದ್ದರೂ ಸಹ ಆರೋಪಿಯಾದ ನೀವು ಯಾವುದೇ ಪ್ರತ್ಯುತ್ತರವನ್ನಾಗಲೀ ಹಣವನ್ನಾಗಲಿ ನೀಡದೆ ಆರೋಪಿಯಾದ ನೀವು ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲದಿದ್ದರೂ ಪ್ರಾಸಾ-1 ಅವರಿಗೆ ಮೋಸ ಮಾಡುವ ದುರುದ್ದೇಶದಿಂದ ಚೆಕ್ಕನ್ನು ನೀಡಿದ್ದು, ಸದರಿ ಕೃತ್ಯವು ನೆಗೋಷಿಯಬಲ್ ಇನ್ಸ್ಟ್ರುಮೆಂಟ್ ಕಾಯಿದೆ ಕಲಂ 138 ರ ರೀತ್ಯಾ ಶಿಕ್ಷಾರ್ಹ ಅಪರಾಧವಾಗಿರುತ್ತದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನೀವು ಏನು ಹೇಳುವಿರಿ?

**ಉತ್ತರಃ**

**ಪ್ರಶ್ನೆ 4:** ನಿಮ್ಮ ಪರ ಸಾಕ್ಷಿಗಳಿವೆಯೇ?

**ಉತ್ತರಃ**

**ಪ್ರಶ್ನೆ 5:** ನೀವು ಹೆಚ್ಚಿಗೆ ಹೇಳುವುದು ಏನಾದರೂ ಇದೆಯೆ?

**ಉತ್ತರಃ**

(ಮೇಲ್ಕಂಡ ಸಾಕ್ಷ್ಯದಾರರ ಹೇಳಿಕೆಗಳನ್ನು ತೆರೆದ ನ್ಯಾಯಾಲಯದಲ್ಲಿ ಓದಿ ಹೇಳಿದ್ದು, ಆರೋಪಿಯು ಕೊಟ್ಟ ಉತ್ತರವನ್ನು ಹಾಗೆಯೇ ದಾಖಲಿಸಿಕೊಳ್ಳಲಾಗಿದೆ ಎಂದು ಈ ಮೂಲಕ ದೃಢೀಕರಿಸುತ್ತೇನೆ.)

**(ನಮ್ರತಾ ಎಸ್. ಹೊಸಮಠ)**

ದಿನಾಂಕಃ **24.06.2025** ಅಪರ ಸಿವಿಲ್ ನ್ಯಾಯಾಧೀಶರು ಮತ್ತು

ಪ್ರ.ದ.ನ್ಯಾ.ದಂಡಾಧಿಕಾರಿಗಳು, ಹುಣಸೂರು.